ಆ) ಈ ಸಾಲಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣಕ್ಕೆ ನಿಗದಿಪಡಿಸಿರುವ ಗುರಿಯನ್ನು ಸಾಧಿಸಲು ಬೇಕಾಗುವ ಎಲ್ಲಾ ಸಾಮಗ್ರಿ ಸಲಕರಣೆಗಳನ್ನು ಡಿಸೆಂಬರ್ 1990 ತಿಂಗಳ ನಂತರ ಒದಗಿಸಲು ಈಗಾಗಲೆ ಕ್ರಮತೆಗೆದುಕೊಂಡಿದೆ. ಈಗ ಪರಿಸ್ಥಿತಿ ಸುಧಾರಿಸಿದೆ.

ಇ) ಈ ಸಾಲಿನಲ್ಲಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣಕ್ಕೆ ಗೊತ್ತು ಮಾಡಿರುವ ಗುರಿಯನ್ನು ಸಾಧಿಸಲು ಅಗತ್ಯವಾದ ಎಲ್ಲಾ ಸಾಮಗ್ರಿಗಳನ್ನು ಒದಗಿಸಲು ಈಗಾಗಲೇ ಕ್ರಮ ತೆಗದುಕೊಳ್ಳಲಾಗಿದೆ.

ಪುತ್ತೂರು ತಾಲ್ಲೂಕಿನ ಕಡಬದಲ್ಲಿ ವಿದ್ಯುತ್ ಸಬ್‌ಸ್ಟೇಷನ್ ಬಗ್ಗೆ.

438 - ಶ್ರೀ ಕೆ. ಕುಶಾಲ (ಸುಳ್ಯ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಕಡಬದಲ್ಲಿ ವಿದ್ಯುತ್ ಸಬ್‌ಸ್ಟೇಷನ್ ಮಂಜೂರಾತಿ ಆಗಿರುವುದು ನಿಜವೆ?

ಆ) ಹಾಗಿದ್ದಲ್ಲಿ, ಸದರಿ ಸಬ್‌ಸ್ಟೇಷನ್ ಮಂಜೂರಾತಿ ಆಗಿ ಅನೇಕ ವರ್ಷಗಳಾಗಿದ್ದಾಗ್ಯೂ ಅದರ ಕೆಲಸ ಪ್ರಾರಂಭಿಸದೇ ಇರಲು ಕಾರಣವೇನು?

ಇ) ಈಗಲಾದರೂ ಸದರಿ ಸಬ್‌ಸ್ಟೇಷನ್ನಿನ ಕಾಮಗಾರಿಯನ್ನು ಪ್ರಾರಂಭಿಸಲು ಜರೂರು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ಹೌದು

ಆ) ಮಂಡಳಿಯು 1989-90ರ ಸಾಲಿನಲ್ಲಿ ನಿರ್ವಹಿಸಬೇಕಾಗಿದ್ದ ಕಾರ್ಯಗಳಲ್ಲಿ ಈ ಸಬ್‌ಸ್ಟೇಷನ್ ನಿರ್ಮಾಣದ ಕಾರ್ಯವನ್ನು ಸೇರಿಸಲಾಗಿತ್ತು. ಆದರೆ ಮಂಡಳಿಯ ಆರ್ಥಿಕ ಮುಗ್ಗಟ್ಟಿನಿಂದ ನಿರ್ಮಾಣ ಕಾರ್ಯವನ್ನು ನಿರ್ವಹಿಸಲಾಗಿಲಿಲ್ಲ.

ಇ) ಈ ಸಬ್‌ಸ್ಟೇಷನ್ ನಿರ್ಮಾಣ ಕಾರ್ಯಕ್ಕೆ ಬೇಕಾಗುವ ಕೆಲವು ಸಾಮಗ್ರಿಗಳನ್ನು ಒದಗಿಸಲಾಗಿದೆ. ನಿರ್ಮಾಣ ಕಾರ್ಯವನ್ನು 1991-92ನೇ ಸಾಲಿನಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಗ್ರಾಮಗಳಲ್ಲಿ ಸೌರ ವಿದ್ಯುಚ್ಛಕ್ತಿ ಚಾಲಿತ ಬೀದಿ ದೀಪಗಳ ನಿಷ್ಕ್ರಿಯೆ ಬಗ್ಗೆ

450 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಮುಖ್ಯಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1986-87 ಮತ್ತು 87-88ರಿಂದ ಸೌರ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿ ಬೀದಿ ದೀಪಗಳನ್ನು ಉರಿಸುತ್ತಿದ್ದ ರಾಜ್ಯದಲ್ಲಿದ್ದ 221 ಹಳ್ಳಿಗಳು ಕಳೆದ ಒಂದು ವರ್ಷದಿಂದ ಕೆಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆ ಹಳ್ಳಿಗಳಿಗೆ ಬೀದಿ ದೀಪ ಒದಗಿಸಲು ಸರ್ಕಾರ ಹೂಡಿರುವ ಹಣ ಎಷ್ಟು?

ಇ) ಆ ಬೀದಿ ದೀಪಗಳು ವ್ಯವಸ್ಥೆ ಕೆಟ್ಟು ಹೋಗಿರುವುದಕ್ಕೆ ಕಾರಣವೇನು ಹಾಗೂ ಅದಕ್ಕೆ ಜವಾಬ್ದಾರರು ಯಾರು?

ಈ) ನಮ್ಮ ದೇಶದ ಹೆಸರಾಂತ ಸಂಸ್ಥೆಯೊಂದು ಆ ಗ್ರಾಮಗಳ ಬೀದಿ ದೀಪಗಳನ್ನು ಸರಿಪಡಿಸಲು ಮುಂದೆ ಬಂದಿದ್ದಲ್ಲಿ, ಸಹ ವಿದ್ಯುಚ್ಛಕ್ತಿ ಮಂಡಳಿಯವರು ನಿರಾಸಕ್ತಿ ತೋರಲು ಕಾರಣವೇನು?

ಉ) ಆ ಗ್ರಾಮಗಳಿಗೆ ಬೀದಿ ದೀಪಗಳನ್ನು ಒದಗಿಸಲು ಬೇಕಾಗಿರುವ ಕಾಲಾವಧಿ ಎಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ಬಂದಿದೆ.

ಆ) 16.20 ಲಕ್ಷ ರೂ.ಗಳು.

ಇ) ಈ ಬೀದಿ ದೀಪಗಳನ್ನು ದುರ್ಗಮ ಗ್ರಾಮಗಳಲ್ಲಿ ಅಂದರೆ ಅರಣ್ಯ ಪ್ರದೇಶ, ಗುಡ್ಡಗಾಡಿನ ಪ್ರದೇಶ ಸ್ಥಾಪಿಸಿರುವುದರಿಂದ ಇವುಗಳ ನಿರ್ವಹಣ ಕಾರ್ಯವನ್ನು ಮಾಡುವುದು ಕಠಿಣವಾದ ಕೆಲಸ. ಹೀಗಾಗಿ ಈ ಬೀದಿ ದೀಪಗಳು ಅವುಗಳ ನಿರೀಕ್ಷಿತ ಜೀವನ ಅವಧಿಗೆ ಮುಂಚಿತವಾಗಿಯೇ ಹಾಳಾದವು. ಇದಕ್ಕೆ ಯಾರೂ ಜವಾಬ್ದಾರರಲ್ಲ.

ಈ) ಈ ಸೋಲಾರ್ ಬೀದಿ ದೀಪಗಳನ್ನು ಸರಿಪಡಿಸುವ ವಿಷಯದಲ್ಲಿ ಮಂಡಳಿಯು ಆಸಕ್ತಿ ಹೊಂದಿದೆ. ಸಂಸ್ಥೆಯು ನೀಡಿರುವ ಪ್ರಸ್ತಾವನೆ ಮಂಡಳಿಯ ಪರಿಶೀಲನೆಯಲ್ಲಿದೆ.

ಉ) ಈ ಬೀದಿ ದೀಪಗಳನ್ನು ದುರ್ಗಮ ಸ್ಥಳಗಳಲ್ಲಿ ಅಂದರೆ ಅರಣ್ಯ ಪ್ರದೇಶ, ಗುಡ್ಡಗಾಡಿನ ಪ್ರದೇಶಗಳಲ್ಲಿರುವ ಗ್ರಾಮ, ಉಪಗ್ರಾಮಗಳಲ್ಲಿ ಸ್ಥಾಪಿಸಿರುವುದರಿಂದ, ಬೀದಿ ದೀಪಗಳನ್ನು ಸರಿಪಡಿಸುವ ಕಾರ್ಯವನ್ನು ಪೂರ್ಣಗೊಳಿಸಲು ಕೆಲವು ತಿಂಗಳುಗಳೇ ಬೇಕಾಗುವುದು.

ರೇಷ್ಮೆ ಬೆಳೆ ಅಭಿವೃದ್ಧಿ

657 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ): ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಬೆಳೆಯ ಅಭಿವೃದ್ಧಿಯಿಂದಾಗಿ ಇಲಾಖೆ ದೊಡ್ಡದಾಗುತ್ತಿದ್ದು ದಕ್ಷತೆ ಮತ್ತು ಪ್ರಾಮಾಣಿಕತೆ ಕ್ಷೀಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ಈ ಇಲಾಖೆಯಲ್ಲಿ ಹೆಚ್ಚಿನ ದಕ್ಷತೆಯನ್ನು ಮೂಡಿಸಲು ಸರ್ಕಾರವು ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳು ಯಾವುವು?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು):

ಅ) ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

ರೇಷ್ಮೆ ಮಾರುಕಟ್ಟೆ ಬಗ್ಗೆ

658 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ): ಮಾನ್ಯ ರೇಷ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ರೇಷ್ಮೆ ಮಾರುಕಟ್ಟೆಯು ದೇಶದಲ್ಲಿ ಅತಿ ದೊಡ್ಡ ಮಾರುಕಟ್ಟೆಯಾಗಿದ್ದು ಪ್ರತಿದಿನ ಸರಾಸರಿ 30,000 ಕೆ.ಜಿ. ರೇಷ್ಮೆ ಗೂಡಿನ ವಹಿವಾಟು ಇರುವುದರಿಂದ ಇಲ್ಲಿ ಒಂದು ರೇಷ್ಮೆ ಕಾರ್ಖಾನೆಯನ್ನು ಪ್ರಾರಂಭಿಸಲು ಸರ್ಕಾರದವರು ತೀವ್ರವಾಗಿ ಪರಿಶೀಲಿಸುವುದೇ?

ಆ) ಹಾಗಿದ್ದಲ್ಲಿ, ಎಷ್ಟು ದಿನಗಳ ಒಳಗಾಗಿ ಕಾರ್ಖಾನೆಯನ್ನು ಸ್ಥಾಪಿಸಲಾಗುವುದು.

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು):

ಅ) ರೇಷ್ಮೆ ಕಾರ್ಖಾನೆಯನ್ನು ಪ್ರಾರಂಭಿಸುವ ಆಲೋಚನೆ ಸರ್ಕಾರಕ್ಕೆ ಇಲ್ಲ.

ಆ) ಉದ್ಭವಿಸುವುದಿಲ್ಲ.